# IN THE COURT OF THE ADDL. SENIOR CIVIL JUDGE & JMFC., GUBBI

# **OS - 228/2023**

Witness present and duly sworn on : 23.02.2026.

<u>Further cross Examination: by Counsel for Plaintiffs :</u>

ಈ ದಾವೆಯ ವಾದಿಗಳಾದ ಗೋವಿಂದರಾಜು, ಅಣ್ಣಯ್ಯಪ್ಪ, ಲಕ್ಷ್ಮಿದೇವಿ, ವೆಂಕಟೇಶ ಮೂರ್ತಿ ಮತ್ತು ಚಂದ್ರ ರವರು ಚೀಲನಹಳ್ಳಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಅವರುಗಳಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಪಿತ್ರಾರ್ಜಿತ ವಾದ ಬೇರೆ ಆಸ್ತಿಗಳು ಚೀರನಹಳ್ಳಿ ಮತ್ತು ನಾರನಹಳ್ಳಿಯಲ್ಲಿ ಇವೆ ಎಂದರೆ ಸರಿ. ದಾವಾ ಆಸ್ತಿಯು ನರಸಿಂಹಯ್ಯ ರವರ ಹೆಸರಿಗೆ ಖಾತೆ ಆಗಿತ್ತು ಎಂದರೆ ಸರಿಯಲ್ಲ. MR No.17/2016-17 ರಂತೆ ನರಸಿಂಹಯ್ಯ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸರ್ವೆ ನಂ.224 ಜಮೀನಿಗೆ ಆಗಿರುತ್ತದೆ. ಸರ್ವೆ ನಂ.224 ದಾವಾ ಆಸ್ತಿ ಎಂದರೆ ದಾವಾ ಆಸ್ತಿಯು ಕೇವಲ ಸರ್ವೆ ನಂ.24 ಆಗಿರುತ್ತದೆ ಆದರೆ ಅವರು ಸರ್ವೆ ನಂ.224 ಜಮೀನನ್ನು ಸೇರಿಸಿರುತ್ತಾರೆ.

ವಾದಿಗಳು ವಿಭಾಗ ಕೋರಿ ಗುಬ್ಬಿಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ OS No.180/2019 ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಗಳು ರಾಜಿ ಮಾಡಿಕೊಂಡರು ಎಂದರೆ ಸರಿ. ಸದರಿ ರಾಜಿ ಪತ್ರದ ಪ್ರಕಾರ ದಾವಾ ಆಸ್ತಿ ಹಳೇ ಸರ್ವೆ ನಂ.24 ಜಮೀನು 1 ನೇ ವಾದಿ ಗೋವಿಂದರಾಜು ರವರಿಗೆ 1 ಎಕರೆ 10 ಗುಂಟೆ ಬಂದಿದೆ ಎಂದರೆ ಸರಿಯಲ್ಲ, 2 ನೇ ವಾದಿ ಅಣ್ಣಯ್ಯಪ್ಪ ನವರಿಗೆ 26¼ ಗುಂಟೆ ಬಂದಿದೆ ಎಂದರೆ ಸರಿಯಲ್ಲ, 3 ನೇ ವಾದಿ ಲಕ್ಷಿದೇವಿ ರವರಿಗೆ 38 ¼ ಗುಂಟೆ ಬಂದಿದೆ ಎಂದರೆ ಸರಿಯಲ್ಲ, 4 ನೇ ವಾದಿ ವೆಂಕಟೇಶ ಮೂರ್ತಿ ಮತ್ತು 5 ನೇ ವಾದಿ ಚಂದ್ರ ರವರಿಗೆ ತಲಾ 38 ¼ ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ವಾದಿಗಳು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಂಜೂರಾದ ವರ್ಷ ದಿನಾಂಕಃ 09.07.1940 ರಿಂದ 2020-21 ತನಕ ನಾವು ಇದ್ದೇವು, ಅತಿಕ್ರಮ

ಪ್ರವೇಶ ಮಾಡಿ ಖಾತೆ ಪಹಣಿ ಮಾಡಿಸಿಕೊಂಡಿರುತ್ತಾರೆ. OS No.189/2019 ರಾಜಿ ಆಧಾರದ ಮೇಲೆ ವಾದಿಗಳು ಅಂತಿಮ ಡಿಕ್ರಿ ಪಡೆದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಜಮೀನನ್ನು ವಾದಿಗಳು ರಾಜಿ ಮಾಡಿಕೊಂಡಿರುತ್ತಾರೆ. OS No.189/2019 ರಾಜಿ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಸದರಿ ದಾವೆಯ ವಿಚಾರ 2019 ರಲ್ಲಿ ನನಗೆ ಮಾಹಿತಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 2020-21 ರಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ. ವಾದಿಗಳ ಹೆಸರಿಗೆ ಇರುವ ಖಾತೆಯನ್ನು ಜಿಲ್ಲಾಧಿಕಾರಿಯ ಮುಂದೆ ಪ್ರಶ್ನಿಸಿದ್ದೇನೆ. ಸದರಿ ಪ್ರಕರಣದ ಸಂಖ್ಯೆ 270/2022.

ಪರಿಶಿಷ್ಟ ಜಾತಿ ಮತ್ತು ಪಂಗಡದ ಆಯೋಗಕ್ಕೆ ಪಂಗಡಕ್ಕೆ 2015-2016 ರ ತನಕ ನಾವು ಸ್ವಾಧೀನದಲ್ಲಿ ಇದ್ದೇವು, ನನ್ನ ದೊಡ್ಡಪ್ಪ ವೆಂಕಟಹನುಮ @ ವೆಂಕಟಹನುಮಯ್ಯ ರವರನ್ನು ನರಸಿಂಹಯ್ಯ ರವರ ಮುತ್ತಾತ ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿ ಖಾತೆ ಪಹಣಿ ಮಾಡಿಸಿಕೊಂಡಿರುವ ಕಾರಣ ಸದರಿ ಆಯೋಗಕ್ಕೆ ದೂರು ಸಲ್ಲಿಸಿರುತ್ತೇನೆ. ಸದರಿ ದೂರಿನಲ್ಲಿ ಗುಬ್ಬಿ ತಹಶೀಲ್ದಾರ್, ಕಂದಾಯ ಇನ್ಸಪೆಕ್ಟರ್, ನರಸಿಂಹಯ್ಯ ಬಿನ್ ಗೋಡೆಗೌಡ ರವರನ್ನು ಎದುರುದಾರಾಗಿ ಮಾಡಿರುತ್ತೇನೆ. ಸದರಿ ದೂರನ್ನು ದಿನಾಂಕಃ 01.03.2018 ರಂದು ನೀಡಿರುತ್ತೇನೆ. ಸದರಿ ದೂರನ್ನು ನೋಟಿಸ್ ದಿನಾಂಕಃ 21.03.2018 ರಂದು ಜಾರಿ ಮಾಡಿರುತ್ತಾರೆ. ಸದರಿ ದೂರು ಆಯೋಗದ ಮುಂದೆ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಸದರಿ ದೂರಿನ ಅಂತಿಮ ಆದೇಶ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ಆಯೋಗವು ದೂರಿನಲ್ಲಿ ನಿರ್ದೇಶನ ನೀಡಿದೆ. ಸದರಿ ನಿರ್ದೇಶನ ಬರವಣಿಗೆಯಲ್ಲಿ ನೀಡಿರುತ್ತಾರೆ. 2020 ರಲ್ಲಿ ಸದರಿ ನಿರ್ದೇಶನ ನೀಡಿರುತ್ತಾರೆ. ಸದರಿ ನಿರ್ದೇಶನ ನೀಡುವಾಗ ನರಸಿಂಹಯ್ಯ ನವರು ಜೀವಂತ ಇರಲಿಲ್ಲ. ನರಸಿಂಹಯ್ಯ ನವರು 2019 ರಲ್ಲಿ ಪೌತಿ ಆಗಿರುತ್ತಾರೆ. ನರಸಿಂಹಯ್ಯ ನವರು ಪೌತಿಯ ನಂತರ ಅವರ ವಾರಸುದಾರರನ್ನು ಎದುರುದಾರರಾಗಿ ಆಯೋಗದ ಮುಂದೆ ಸಲ್ಲಿಸಿರಲಿಲ್ಲ. ಗೋವಿಂದರಾಜು ರವರು ನರಸಿಂಹಯ್ಯ ರವರ ಮಗನಲ್ಲ. ಸಾಕ್ಷಿ ಮುಂದುವರೆದು ನರಸಿಂಹಯ್ಯ ರವರ ಪರವಾಗಿ ಗೋವಿಂದರಾಜು ರವರು ಬರುತ್ತಿದ್ದರು. ನರಸಿಂಹಯ್ಯ ನವರು ಮರಣದ ವಿಷಯವನ್ನು ಮರೆಮಾಚಿ ಆಯೋಗದ ಮುಂದೆ ಅವರ ವಾರಸುದಾರರನ್ನು

ಸೇರಿಸಲಿಲ್ಲ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ಸಹ ಆಯೋಗದ ಮುಂದೆ ನರಸಿಂಹಯ್ಯ ರವರ ವಾರಸುದಾರರನ್ನು ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಖಾತೆ ಪಹಣಿ ನನ್ನ ಹೆಸರಿನಲ್ಲಿ ಬದಲಾವಣೆ ಆಗಿರುವ ಕಾರಣ ಸದರಿ ಆಯೋಗದ ಮುಂದೆ ದೂರು ಚಾಲ್ತಿಯಲ್ಲಿ ಇರುವುದಿಲ್ಲ. ಸದರಿ ದೂರು ಮುಗಿದಿರುವ ಬಗ್ಗೆ ನ್ಯಾಯಾಲಯದಲ್ಲಿ ನಾನು ಆದೇಶವನ್ನು ನಾನು ಹಾಜರುಪಡಿಸಿಲ್ಲ.

ಜಿಲ್ಲಾಧಿಕಾರಿ ಮತ್ತು ಸದರಿ ಆಯೋಗದ ಪ್ರಕರಣಗಳು MR ಆದೇಶಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿ. ಆಯೋಗದ ಪ್ರಕರಣದಲ್ಲಿ ಯಾವುದೇ ತರಹದ ನಿರ್ದೇಶನ ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಅಥವಾ ನನ್ನ ತಂದೆ ಅಥವಾ ನನ್ನ ತಾತ ವಾದಿಗಳ ತಾತ ರವರ ಹೆಸರಿನಲ್ಲಿ ಆದ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಈ ದಾವೆಯು ಇರುವ ಕಾರಣ ಪ್ರಶ್ನಿಸಿರುವುದಿಲ್ಲ. 1952 ಮತ್ತು 1960 ರಲ್ಲಿ ವಾದಿಗಳ ತಾತ ರವರ ಹೆಸರಿಗೆ ಕ್ರಯಪತ್ರ ಆಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ವಿಚಾರ ನನ್ನ ತಂದೆಗೆ ಕ್ರಯ ಪತ್ರ ಆಗಿದ ದಿನಾಂಕದಿಂದ ಗೊತ್ತಿತ್ತು ಎಂದರೆ ಸರಿಯಲ್ಲ. ನಿಡಿ-30 ರಲ್ಲಿ ಯಾವುದೇ ಆದೇಶವನ್ನು ಆಯೋಗದಿಂದ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಿನಾಂಕದಲ್ಲಿ ಸಿ.ಎಸ್ ಪುರ ಹೋಬಳಿಯ ರೇವಿನ್ಯೂ ಇನ್ಸಪೆಕ್ಟರ್ ಹಾಜರಿದ್ದು ನಮ್ಮ ಕಡೆಯಿಂದ ತಪ್ಪಾಗಿದ್ದು ಒಂದು ತಿಂಗಳ ಒಳಗಡೆ ಖಾತೆ ಸರಿ ಮಾಡಿಕೊಡುತ್ತೇವೆಂದು ಹೇಳಿದ್ದರು. ಸಾಕ್ಷಿ ಮುಂದುವರೆದು ಅದರಂತೆ ಖಾತೆ ಸರಿ ಮಾಡಿಕೊಟ್ಟಿರುತ್ತಾರೆ.

(Further cross examination deferred at the request of counsel for the plaintiffs)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi